ಜೂನ್-2021

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ
ವಾರ್ತಾಪತ್ರ

## "ಆಜಾದ್ ಕಾ ಅಮೃತ್ ಮಹೋತ್ಸವ್"




ಸಮಗ್ರ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯ ಮೂಲಕ ಎಲ್ಲಾ ಗ್ರಾಮಗಳಲ್ಲಿ ಶೌಚಾಲಯಗಳ ಬಳಕೆಯ ಸುಸ್ಥಿರತೆಯನ್ನು ಕಾಯ್ದುಕೊಂಡು **ODF-Plus** ಹಾದಿಯಲ್ಲಿ ಸಾಗುವ ಮೂಲಕ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ ಹಂತ 1 ರಲ್ಲಿ ಸಾಧಿಸಿದ ಅಸಾಮಾನ್ಯ ಮೈಲುಗಲ್ಲನ್ನು ಮುಂದೆ ಸಾಗಿಸಲು ಕೇಂದ್ರ ಜಲಶಕ್ತಿ ಮಂತ್ರಾಲಯವು **'ರಾಷ್ಟ್ರೀಯ ಸ್ವಚ್ಛತಾ ಫಿಲ್ಮೋಂ ಕಾ ಮಹೋತ್ಸವ್ (ಆಜಾದ್ ಕಾ ಅಮೃತ್ ಮಹೋತ್ಸವ್)'** ಎಂಬ ಹೆಸರಿನಡಿ ರಾಷ್ಟ್ರೀಯ ಕಿರುಚಿತ್ರ ಸ್ಪರ್ಧೆಯನ್ನು ಆಯೋಜಿಸಿದೆ. **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ ಹಂತ 2ರ ಉದ್ದೇಶಗಳಂತೆ **ODF-Plus** ಗುರಿಗಳ ಕುರಿತು ಗ್ರಾಮೀಣ ಜನರಲ್ಲಿ ಸಾಮೂಹಿಕ ಜಾಗೃತಿ ಮೂಡಿಸಲು ಈ ಕಿರುಚಿತ್ರ ಸ್ಪರ್ಧೆಯನ್ನು 16ನೇ ಏಪ್ರಿಲ್ ನಿಂದ 15ನೇ ಆಗಸ್ಟ್ ವರೆಗೆ ಹಮ್ಮಿಕೊಳ್ಳಲಾಗಿದೆ ಈ ಕಿರುಚಿತ್ರ ಸ್ಪರ್ಧೆ ದೇಶಾದ್ಯಂತ ಚಾಲ್ತಿಯಲ್ಲಿರಲಿದ್ದು, ಮಾನ್ಯತೆ ಪಡೆದಿರುವ ಭಾರತದ ಭಾಷೆಗಳಲ್ಲಿ, 10 ವರ್ಷ ಮೇಲ್ಪಟ್ಟ ಎಲ್ಲಾ ಭಾರತೀಯ ನಾಗರೀಕರು ಕಿರುಚಿತ್ರವನ್ನು ತಯಾರು ಮಾಡಿ, ತಮ್ಮ ಯೂಟ್ಯೂಬ್ ಖಾತೆಯ ಮೂಲಕ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿ ನಂತರ ಭಾರತ ಸರ್ಕಾರ ನೀಡಿರುವ ವೆಬ್‌ಸೈಟಿಗೆ ಈ ವಿಡಿಯೋ ಲಿಂಕ್ ಅನ್ನು ಅಪ್‌ಲೋಡ್ ಮಾಡಬಹುದಾಗಿದೆ. ಈಗಾಗಲೇ **ರಾಜ್ಯಾದ್ಯಂತ ರಾಷ್ಟ್ರೀಯ ಸ್ವಚ್ಛತಾ ಫಿಲ್ಮೋಂ ಕಾ ಮಹೋತ್ಸವ್ (ಆಜಾದ್ ಕಾ ಅಮೃತ್ ಮಹೋತ್ಸವ್)** ಸ್ಪರ್ಧೆಯಲ್ಲಿ ಸಾರ್ವಜನಿಕರನ್ನು ಭಾಗವಹಿಸುವಂತೆ ಪ್ರೇರೇಪಿಸಲು ಕ್ರಮ ವಹಿಸಲಾಗಿದೆ.

## Social Media Champion ಸ್ಪರ್ಧೆ:




ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ವಿವಿಧ ಸಾಮಾಜಿಕ ಮಾಧ್ಯಮಗಳನ್ನು ನಿರ್ವಹಿಸುತ್ತಾ ಬಂದಿದ್ದು, ರಾಜ್ಯ ಕಚೇರಿಯ ಫೇಸ್‌ಬುಕ್ ಪೇಜ್ ಮತ್ತು ಯೂಟ್ಯೂಬ್ ಚಾನೆಲ್ ಅನ್ನು ಹೆಚ್ಚೆಚ್ಚು ಜನಪ್ರಿಯಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿರುತ್ತದೆ. ಈ ನಿಟ್ಟಿನಲ್ಲಿ ಇಲಾಖೆಯ ಫೇಸ್‌ಬುಕ್ ಪೇಜ್ **(https://www.facebook.com/GovtOfKarnatakaRdpr/)** ಹಾಗೂ ಯೂಟ್ಯೂಬ್ ಚಾನೆಲ್ **(https://youtube.com/c/GovtOfKarnatakaRDPR)**ಗಳು ಇನ್ನಷ್ಟು ಪರಿಣಾಮಕಾರಿಯಾಗಿ ಗ್ರಾಮೀಣ ಜನರನ್ನು ತಲುಪಿಸಲು, ದಿನಾಂಕ: 01.03.2021 ರಿಂದ 31.08.2021 ರ ವರೆಗೆ ಆರು ತಿಂಗಳುಗಳ ಕಾಲ **"Social Media Champion"** ಸ್ಪರ್ಧೆ ಯನ್ನು ಆಯೋಜಿಸಿದೆ. ಈಗಾಗಲೇ ಸ್ಪರ್ಧೆಯ ಮೂರು ತಿಂಗಳುಗಳು ಪೂರ್ಣಗೊಂಡಿದ್ದು, ಪ್ರತಿ ಮಾಹೆಯಲ್ಲಿ ವಿಜೇತರಿಗೆ ನಿಗದಿತ ಬಹುಮಾನವನ್ನು ನೀಡಲಾಗಿದೆ. ಪ್ರಸ್ತುತ ಮಾಹೆಯನ್ನು ಸೇರಿದಂತೆ ಸ್ಪರ್ಧೆಯ ಅವಧಿಯಲ್ಲಿ ಇಲಾಖೆಯ ಫೇಸ್‌ಬುಕ್ ಪೇಜ್ ಹಾಗೂ ಯೂಟ್ಯೂಬ್ ಚಾನೆಲ್ ಮತ್ತಷ್ಟು ಗ್ರಾಮೀಣ ಜನರನ್ನು ತಲುಪುವ ನಿರೀಕ್ಷೆಯಿದೆ.

## ತರಬೇತಿ ಕಾರ್ಯಕ್ರಮಗಳು

### Implementation of MRF:






ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆಯು **ಸ್ವಚ್ಛ ಭಾರತ್ ಮಿಷನ್ (ಗ್ರಾ)** ಯೋಜನೆಯ ಹಂತ 2 ನ್ನು ಅನುಷ್ಠಾನಗೊಳಿಸುತ್ತಿದ್ದು, ಈಗಾಗಲೇ ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಘೋಷಿಸಿದ್ದು, ಇದೀಗ **ODF-Plus** ಅನ್ನಾಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದ್ಯ ರಾಜ್ಯಾದ್ಯಂತ 1883 **ಸ್ವಚ್ಛ ಸಂಕೀರ್ಣ**ಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ಘಟಕಗಳಲ್ಲಿ ಸಂಗ್ರಹಿಸಲಾದ ಒಣ ತ್ಯಾಜ್ಯದ ವಿಲೇವಾರಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ರಾಜ್ಯಾದ್ಯಂತ **MRF** ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ದಿನಾಂಕ 17 ಮತ್ತು 19ನೇ ಜೂನ್‌ಗಳಂದು ರಾಜ್ಯ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ **SLWM** ಸಮಾಲೋಚಕರುಗಳಿಗೆ **Video Conference** ಮೂಲಕ ತರಬೇತಿಯನ್ನು ನೀಡಲಾಯಿತು. ಉಪ ನಿರ್ದೇಶಕರು, **ಸ್ವಚ್ಛ ಭಾರತ್ ಮಿಷನ್(ಗ್ರಾ)** ಇವರ ನೇತೃತ್ವದಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ **SLWM, Project Manager** ಹಾಗೂ **SHP** ಸಮಾಲೋಚಕರು ತರಬೇತಿ ನೀಡಿದರು.

ಮುಂದುವರೆದು ರಾಜ್ಯಾದ್ಯಂತ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ **Incinerator** ಖರೀದಿ, ಅಳವಡಿಕೆ ಕಾರ್ಯಕ್ರಮ ಜಾರಿಯಲ್ಲಿದ್ದು, ಈ ಸಂಬಂಧ ರಾಜ್ಯ ಕಚೇರಿ ನಿಗದಿಪಡಿಸಿರುವ ತಾಂತ್ರಿಕ ಅಂಶಗಳನ್ನು ಹೊಂದಿರುವ ಸಂಸ್ಥೆಗಳಿಂದಲೇ ಜಿಲ್ಲೆ ಅಥವಾ ಗ್ರಾಮ ಪಂಚಾಯಿತಿಗಳು **Incinerator** ಖರೀದಿಸಬೇಕಿದ್ದು, ಈ ಸಂಬಂಧ ಜಿಲ್ಲೆಗಳಲ್ಲಿ ಆಯೋಜಿಸುತ್ತಿರುವ ಎಲ್ಲಾ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ರಾಜ್ಯ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ **ಎಸ್.ಹೆಚ್** ಹಾಗೂ **ಎಂ.ಹೆಚ್.ಎಂ** ಸಮಾಲೋಚಕರು ಪಾಲ್ಗೊಳ್ಳುವ ಮೂಲಕ ಅಗತ್ಯ ಸಲಹೆಗಳನ್ನು ನೀಡುವ ಕಾರ್ಯ ಪ್ರಗತಿಯಲ್ಲಿದೆ.

